ವಿಷಯ : ಗ್ರಾಮೀಣ ಜನರ ಆರ್ಥಿಕ ಅಭಿವೃದ್ಧಿಯ ಬಗ್ಗೆ.

ಪ್ರ. 217 (129) ಶ್ರೀ ವಿ. ಎಸ್. ಆಚಾರ್ಯ (ಉಡುಪಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ.—

(ಅ) ಗ್ರಾಮೀಣ ಜನರ ಆರ್ಥಿಕಾಭಿವೃದ್ಧಿಗೆ ಯಾವ ಯೋಜನೆಗಳನ್ನು ಆದ್ಯತೆಯ ಮೇಲೆ ಸರಕಾರದವರು ರೂಪಿಸಿದ್ದಾರೆ;

(ಆ) ಹಾಗಿದ್ದರೆ ಕೃಷಿ ಕ್ಷೇತ್ರದಿಂದ ಜನರನ್ನು ಬಿಡುಗಡೆಗೊಳಿಸಿ ಇತರ ಆರ್ಥಿಕ ಚಟುವಟಿಕೆಗಳತ್ತ ಅವರನ್ನು ತೊಡಗಿಸುವ ಬಗ್ಗೆ ಗಮನವೀಯಲಾಗಿದೆಯೇ ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು).—

(ಅ) ಸರಕಾರವು ಈ ಯೋಜನೆಗಳನ್ನು ರೂಪಿಸಿದ್ದಾರೆ :—

(1) ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ.
(2) ಬುಡಕಟ್ಟು ಜನಾಂಗ ಉಪಯೋಜನೆ.
(3) ವಿಶೇಷ ಮಿಶ್ರತಳಿ ಜಾನುವಾರು ಉತ್ಪಾದನೆ ಯೋಜನೆ.
(4) ನೇಗಿಲು ಭಾಗ್ಯ.
(5) ಅಂತ್ಯೋದಯ ಯೋಜನೆ.
(6) ಗ್ರಾಮೀಣ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆ.
(7) ಟೈಸಮ್ ಯೋಜನೆ.
(8) ಹೆಚ್ಚುವರಿ ಭೂಮಿ ವಿತರಣೆ ಮಾಡಿರುವವರಿಗೆ ಸೌಲಭ್ಯ ಒದಗಿಸುವ ಯೋಜನೆ.
(9) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ ಇತ್ಯಾದಿ.

(ಆ) ಇದು ಕೇವಲ ಅಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆಯಲ್ಲ, ಆದರೆ ಅನೇಕ ಅಭಿವೃದ್ಧಿ ಇಲಾಖೆಗಳಿಗೆ ಸಂಬಂಧವಾಗಿದೆ. ಇಂದು ಸರಕಾರವು ಅನೇಕ ಯೋಜನೆಗಳಲ್ಲಿ ಆರ್ಥಿಕ ಚಟುವಟಿಕೆಗಳನ್ನು ನಿರೂಪಿಸಿದ್ದು ಸರ್ವೇ ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶದ ಕೃಷಿ ಕ್ಷೇತ್ರದ ರೈತರಿಗೆ ದಿನಗೂಲಿ ಕಾಮಗಾರಿ ಕೆಲಸಗಳಲ್ಲಿ ಹಾಗೂ ವ್ಯವಹಾರಿಕ ಚಟುವಟಿಕೆಗಳನ್ನು ಒದಗಿಸುತ್ತಾ ಇದೆ. ಕೃಷಿ ಕ್ಷೇತ್ರದ ಜನರಿಗೆ ಕೂಲಿ ಕೆಲಸದ ಜೊತೆಗೆ ಸಂಪನ್ಮೂಲಗಳನ್ನು ಒದಗಿಸಲಾಗುತ್ತಿದೆ. ಇಂದು ಸರಕಾರದ ಆರ್ಥಿಕ ಹಣ ದೂಡಿಕೆಯು ಬ್ಯಾಂಕುಗಳ ಮುಖಾಂತರ ಒದಗಿಸುವ ಸೌಲಭ್ಯ ಮತ್ತು ಇತರ ಆರ್ಥಿಕ ಯೋಜನೆಗಳು ಕೃಷಿ ಕ್ಷೇತ್ರದ ಜನರಿಗೆ ಸಹಾಯಕವಾಗಿದೆ. ಪಂಚವಾರ್ಷಿಕ ಯೋಜನೆಯಲ್ಲಿ ಬರುವ ಗ್ರಾಮಾಂತರ ಅಭಿವೃದ್ಧಿ ಯೋಜನೆಗಳಿಂದ ಕೃಷಿ ಕ್ಷೇತ್ರದ ಜನರಿಗೆ ತಕ್ಕಷ್ಟು ಮಟ್ಟಿಗೆ ಆರ್ಥಿಕ ಸಹಾಯ ದೊರೆಯುತ್ತಿದೆ. ಆದರೆ ಅದರಲ್ಲಿ ಮುಖ್ಯವಾಗಿ ಐ.ಆರ್,ಡಿ,ಪಿ, ಎನ್,ಆರ್,ಇ,ಪಿ, ಡಿ,ಪಿ,ಇ,ಪಿ. ನೇಗಿಲು ಭಾಗ್ಯ, ಭೂಸುಧಾರಣೆ ಇತ್ಯಾದಿ ಹಾಗೂ ಅನೇಕ ಯೋಜನೆಗಳೂ ಜೀತದಾಳುಗಳಿಗೂ ಹಾಗೂ ಕೃಷಿ ಕಾರ್ಮಿಕರಿಗೂ ಪ್ರಯೋಜನಕಾರಿಯಾಗಿದೆ.

ಶ್ರೀ ವಿ. ಎಸ್. ಆಚಾರ್ಯ.—ಇವೊತ್ತು ಗ್ರಾಮೀಣ ಆರ್ಥಿಕ ಅಭಿವೃದ್ಧಿ ಆಗಬೇಕಾಗಿದ್ದರೆ, ಬರೀ ಕೃಷಿ ವಿಸ್ತರಣ ಒಂದರಿಂದಲೇ ಸಾಧ್ಯ ಎಂದು ತಾವು ನಂಬಿಕೊಂಡಿದ್ದೀರಿ, 70 ಜನ ಕೃಷಿಕರು ಉಳಿದ 30 ಜನರಿಗೆ ಆಗುವಷ್ಟು ಮಾಡಲಿಕ್ಕೆ ಆಗುತ್ತಿಲ್ಲ. ಮಾರ್ಕೆಟಬಲ್ ಸರ್‌ಪ್ಲಸ್ ಕೊಡಲಿಕ್ಕೆ ಆಗುತ್ತಿಲ್ಲ. We have to release people from Agriculture and farming food and fibre front. ನಾಲ್ಕು ಪರ್‌ಸೆಂಟ್ ಜನ ಅಮೆರಿಕಾದಲ್ಲಿ 108 ಜನರಿಗೆ ಆಗುವಷ್ಟು ಉತ್ಪತ್ತಿ ಮಾಡುತ್ತಿದ್ದಾರೆ. ನಮ್ಮಲ್ಲಿರತಕ್ಕ 70 ಜನ ಕೃಷಿಕರು, ಉಳಿದ 30 ಜನರಿಗೆ ಆಗುವಷ್ಟು ಮಾಡಲಿಕ್ಕೆ ಆಗುವುದಿಲ್ಲ. ಈಗ ತಾವು ಏನು ಸೂಚಿಸಿದ್ದೀರಿ, ಅಗ್ರಿಕಲ್ಚರ್ ಎಕ್ಸ್‌ಟೆನ್‌ಷನ್ ತರಹ ಇದೆ, ನಿಮ್ಮ ಇಲಾಖೆ ಇರಲಿ, ಗ್ರಾಮಾಭಿವೃದ್ಧಿ ಇಲಾಖೆ ಜವಾಬ್ದಾರಿ ತಮ್ಮ ಮೇಲೆ ಇದೆ. ಈ ದೃಷ್ಟಿಯಿಂದ ಕೃಷಿಕ್ಷೇತ್ರದಿಂದ ಜನರನ್ನು ಬಿಡುಗಡೆಗೊಳಿಸಲಿಕ್ಕೆ ಏನು ಯೋಜನೆಗಳನ್ನು ತೆಗೆದುಕೊಂಡಿದ್ದೀರಾ ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಅಬ್ದುಲ್ ನಜೀರ್‌ಸಾಬ್.—ಇದು ಅತ್ಯಂತ ಮಹತ್ತರವಾದ ಪ್ರಶ್ನೆ. ನನ್ನ ಇಲಾಖೆಗೆ ಸೀಮಿತವಾದಂತೆ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ. ಈ ದೇಶದ ಯೋಜನೆಯನ್ನು ಮಾಡತಕ್ಕವರು ಎಂದರೆ ಪ್ಲಾನಿಂಗ್ ಇಲಾಖೆಯವರು ಇದಕ್ಕೆ ಉತ್ತರ ಕೊಡಬೇಕು. ಕೃಷಿ ಕ್ಷೇತ್ರವಲ್ಲಿರತಕ್ಕ ಜನರನ್ನು ಬೇರೆ ಉತ್ಪಾದನಾ ಕ್ಷೇತ್ರಗಳಿಗೆ ಹಾಕುವುದಕ್ಕೆ ಸರ್ಕಾರ ಏನು ಯೋಜನೆಗಳನ್ನು ಹಾಕಿಕೊಂಡಿದೆ ಎಂಬುದು ತಮ್ಮ ಅಭಿಪ್ರಾಯ ಎಂದು ಕಾಣಿಸುತ್ತದೆ. ನನ್ನ ಇಲಾಖೆಗೆ ಸೀಮಿತವಾಗಿ ಹೇಳುವುದಾದರೆ ನಮ್ಮಲ್ಲಿ ಟೈಸಂ ಎಂದು ಒಂದು ಯೋಜನೆ ಇದೆ. ಅಂದರೆ ಇದರಲ್ಲಿ ಟ್ರೈನಿಂಗ್ ಕೊಡುವುದು. ಐ.ಆರ್.ಡಿ.ಪಿ. ಯಲ್ಲಿ ದನ

ಗಳನ್ನು ಕೊಡುವುದು, ಕುರಿಗಳನ್ನು ಕೊಡುವುದು ಇಂಥ ಕಸುಬುಗಳನ್ನು ಮಾಡುವುದು ಇದೆ. ಇನಕ್ಕೆ ಗ್ರಾಮೀಣ ಅಭಿವೃದ್ಧಿ ಇದೆ. ಆದರೆ ತಾವು ಹೇಳುವ ವಿಚಾರಕ್ಕೆ ಈ ದೇಶದ ಯೋಜನಾ ಇಲಾಖೆ ಮಾಡಬೇಕಾಗುತ್ತದೆ.

ಡಾ ॥ ಪಿ. ಎಸ್. ಆಚಾರ್ಯ.—ಈ ಸರ್ಕಾರದ ಮುಂದೆ ಅದೂ ಸೇರಿದಂತೆ ಇಂಥ ಯೋಜನೆ ಏನಾದರೂ ಇದೆಯೆ ?

ಅಧ್ಯಕ್ಷರು.—ಇವರು ಗ್ರಾಮೀಣ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಉತ್ತರವನ್ನು ಹೇಳುತ್ತಾರೆ ಆದರೆ ಒಟ್ಟು ಸರ್ಕಾರದ ಪರವಾಗಿ ಉತ್ತರವನ್ನು ಹೇಳುವುದಕ್ಕಾಗುವುದಿಲ್ಲ.

ಡಾ ॥ ವಿ. ಎಸ್. ಆಚಾರ್ಯ.—ಇದಕ್ಕೆ ಬೇರೆ ಯಾವ ವಿಧಾನದಿಂದ ನಮಗೆ ಉತ್ತರ ಸಿಕ್ಕುತ್ತದೆ ?

ಅಧ್ಯಕ್ಷರು.—ಮುಖ್ಯಮಂತ್ರಿಗಳನ್ನು ಕೇಳಿದರೆ ಅವರು ಉತ್ತರ ಕೊಡುತ್ತಾರೆ.

ವಿಷಯ: ವರ್ಗಾವಣೆಗಳಿಗಾಗಿ ಮಾಡಿದ ವೆಚ್ಚ.

ಪ್ರ. 218 (143) ಶ್ರೀ ಪಿ. ರಾಮಚಂದ್ರರಾವ್ (ಉಲ್ಲಾಳ್).—ಶ್ರೀ ಎಸ್. ಸೂರ್ಯನಾರಾಯಣರಾವ್ (ಪರ್ತೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಶಿಕ್ಷಣ ಇಲಾಖೆಯಲ್ಲಿ 10-1-1983 ನಿಂದ ಈ ತಹಲವರೆಗೆ ಮಾಡಿರುವ ಒಟ್ಟು ವರ್ಗಾವಣೆಗಳೆಷ್ಟು ; ಇದರಲ್ಲಿ ಅವಧಿ ಮುಗಿಯುವ ಮೊದಲೇ ಮಾಡಿರುವ ವರ್ಗಾವಣೆಗಳೆಷ್ಟು ;

(ಆ) ಈ ವರ್ಗಾವಣೆಗಳಲ್ಲಿ ಕ್ಯಾನ್ಸಲ್ ಆದುವೆಷ್ಟು ಮತ್ತು ಪುನರ್ವರ್ಗಾವಣೆ ಆದ ಪ್ರಸಂಗಗಳೆಷ್ಟು ;

(ಇ) ಈ ವರ್ಗಾವಣೆ ಮತ್ತು ಪುನರ್ವರ್ಗಾವಣೆಗಳನ್ನು ನಿಯಂತ್ರಿಸಲು ನಿಯಮಾವಳಿಗಳು ಇವೆಯೆ : ಇದ್ದರೆ ಅವು ಯಾವುವು ;

(ಈ) ಈ ವರ್ಗಾವಣೆಗಳ ಸಂಬಂಧದಲ್ಲಿ ಜನವರಿಯಿಂದೀಚೆಗೆ ಸರ್ಕಾರಕ್ಕೆ ಒಟ್ಟು ಎಷ್ಟು ವೆಚ್ಚವಾಗಿದೆ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಒಟ್ಟು ವರ್ಗಾವಣೆ—8126 ; ಅವಧಿ ಮುಗಿಯುವ ಮೊದಲೇ ಆದವು—3322.

(ಆ) ಕ್ಯಾನ್ಸಲ್ ಆದವು—43 ; ಪುನರ್‌ವರ್ಗಾವಣೆ ಆದವು—18

(ಇ) ಹೌದು. ಸರ್ಕಾರದ ಆದೇಶ ಡಿಪಿಎಆರ್ 15 ಎಸ್‌ಟಿಆರ್ 81 ದಿನಾಂಕ 27-2-1982 ಮತ್ತು 16-6-1982 ರಲ್ಲಿರುವ ನಿಯಮಾವಳಿಗಳು.

(ಈ) ವಿವರಗಳನ್ನು ತರಿಸಿ ತಿಳಿಸಲಾಗುವುದು.

ಶ್ರೀ ಬಿ. ಎಸ್. ಸೂರ್ಯನಾರಾಯಣರಾವ್.—ತಾವು ಹೇಳಿದಿರಿ, ಟ್ರಾನ್ಸ್‌ಫರ್ ಆಗಿರುವುದು 8126 ಎಂದು. ಇದರಲ್ಲಿ ಅವಧಿ ಮುಗಿಯುವ ಮೊದಲೇ ಆಗಿರುವುದು 3322. ಇದು 1981ರಲ್ಲಿ ಎಷ್ಟಿತ್ತು ? ಮತ್ತು 1982ರಲ್ಲಿ ಎಷ್ಟಿತ್ತು ಎಂಬುದನ್ನು ಹೇಳುವುದಕ್ಕಾಗುತ್ತದೆಯೆ ಅವಧಿ ಮುಗಿಯುವ ಮೊದಲೇ ವರ್ಗಾವಣೆ ಮಾಡಿದ್ದರಿಂದ ನಮಗೆ ತೊಂದರೆಯಾಗಿದೆಯೆಂದು ಆ ಜನರಿಂದ ಏನಾದರೂ ಅರ್ಜಿಗಳು ಬಂದಿದ್ದುವೆ ?

ಶ್ರೀ ಬಿ. ರಾಚಯ್ಯ.—ಹಿಂದಿನ ವರ್ಷದ ಪ್ರಿವೆಂಚೂರ್ ಟ್ರಾನ್ಸ್‌ಫರ್‌ಗೆ ಸಂಬಂಧಪಟ್ಟಂತೆ ನನ್ನ ಹತ್ತಿರ ಅಂಕಿಅಂಶಗಳಿಲ್ಲ. ಆದರೆ ಹಿಂದೆ 5 ವರ್ಷ ಮುಗಿದಿದ್ದರೆ ಮಾತ್ರ ಅಂಥವರ ವರ್ಗಾವಣೆಗೆ ಅವಕಾಶ ಇತ್ತು. 5 ವರ್ಷದೊಳಗೆ ಇರುವವರು ವರ್ಗಾವಣೆಗೆ ಅರ್ಜಿಗಳನ್ನು ಕೊಟ್ಟಿದ್ದಾರೆ. ಗಂಡ ಹೆಂಡತಿಯರು ನಮ್ಮನ್ನು ದೂರ ಹಾಕಿದ್ದಾರೆ, ನಾವು ಹತ್ತಿರ ಇರಬೇಕೆಂದು ಕೇಳಿರುವುದು. ಇನ್ನು ಕೆಲವರು ನಾವು ಇಷ್ಟರಲ್ಲಿಯೇ ನಿವೃತ್ತಿಯಾಗುವುದರಿಂದ ನಮ್ಮನ್ನು ನಮ್ಮ ಊರಿನ ಹತ್ತಿರವಲ್ಲೇ ಹಾಕಬೇಕೆಂದು, ಇನ್ನು ಕೆಲವರು ಆನಾರೋಗ್ಯದಿಂದಿದ್ದೇವೆಂದು ಸರ್ಟಿಫಿಕೇಟ್‌ಗಳನ್ನು ಕೊಟ್ಟಿರುವುದರಮೇಲೆ. ಇನ್ನು ಕೆಲವು ಹರಿಜನ ಹೆಣ್ಣುಮಕ್ಕಳು ತಮ್ಮನ್ನು ದೂರ ಹಾಕಿದ್ದಾರೆ. ನಮ್ಮನ್ನು ಹತ್ತಿರದಲ್ಲೇ ಹಾಕಬೇಕೆಂದು ಕೇಳಿ ಅರ್ಜಿಗಳು ಬಂದಿದ್ದವು. ಅಂಥವುಗಳನ್ನು ಪರಿಶೀಲಿಸಿ ಅವರುಗಳ ವರ್ಗಾವಣೆಗೆ ಆದೇಶ ಕೊಟ್ಟಿದ್ದೇವೆ.

ಶ್ರೀ ಜಿ. ಎಸ್. ಸೂರ್ಯನಾರಾಯಣರಾವ್.—ಗಂಡ ಹೆಂಡತಿಯರು ದೂರ ದೂರ ಇದ್ದರೆ ಅವರ ಕಷ್ಟವನ್ನು ನೋಡಿ ವರ್ಗಮಾಡಿದ್ದೇವೆಂದು ಹೇಳಿದಿರಿ. ಇದೇ ನೀತಿಯನ್ನು ಇನ್ನು ಮುಂದೆಯೂ ಅನುಸರಿಸುತ್ತೀರಾ ?